ಅಕ್ಕರೆಯ ಬೆಟ್ಟ ಹೊತ್ತು ನೆತ್ತಿಗೆ ತುಟಿ ತಾಕಿಸುತ್ತಿದ್ದ.

ಈಗ್ಗೈದು ನಿಮಿಷದ ಮೊದಲು ಅದೇನು ನಿರ್ಧರಿಸಿದ್ದಳೋ ಅದೆಲ್ಲವೂ ಮರೆತು ಹೋಗಿ ಪಲ್ಲವಿ ಮತ್ತೆ ನೆರೆ ನುಗ್ಗಿದ ಊರಿನಂತಾದಳು. ಮತ್ತೆ ಅವನೇ... ಮತ್ತೆಮತ್ತೆ ಅವನೇ.

ಅವನಿಗೇನೂ ಅನಿಸುತ್ತಿಲ್ಲವೆ?

ನಿಮಿಷಕ್ಕೊಮ್ಮೆ ನನ್ನ ಕುರಿತು ಯೋಚಿಸಿದವ. ಬಿಡುವಾದಾಗಲೆಲ್ಲಾ 'ಏನು ನಡೀತಿದೆ ರಾಣಿ ಸಾಹೇಬ' ಅನ್ನುತ್ತಿದ್ದವ. ಈಗೇನಾಯಿತು? ಹಾಗಾದರೆ ಎಲ್ಲಾ ಪ್ರೇಮಕಥೆಗಳೂ ದುರಂತವೆನ್ನುವದನ್ನು ಒಪ್ಪಲೇಬೇಕೇ?

ಪಲ್ಲವಿ...

ಹೀಗಿರಲಿಲ್ಲ ಆ ಮೊದಲು. ಯಾರ ಸ್ನೇಹದ ಮಾತಿಗೂ, ನಗುವಿಗೂ ಅವಳದ್ದು ವಿಚಿತ್ರ ನಿರಾಕರಣೆಯ ಮೌನ. ಅವಳನ್ನು ಮಾತಾಡಿಸಲು, ಅವಳ ಸ್ನೇಹ ಸಂಪಾದಿಸಲು ಯತ್ನಿಸಿದವರೆಲ್ಲಾ ಅವಳ ಅಸಹಜ ಮೌನಕ್ಕೆ ಬೇಸತ್ತು ದೂರಾಗುತ್ತಿದ್ದರು. ಪಲ್ಲವಿಗೇನೂ ಅದರಿಂದ ಬೇಸರವಿರಲಿಲ್ಲ. ಬದಲಿಗೆ ಹಾಗೆ ಯಾರೂ ಹತ್ತಿರಾಗಬಾರದಂತಲೇ ಅವಳು ಮೌನ ಹೊದ್ದಿದ್ದಳು.

ಯಾವುದೋ ದುರಂತವನ್ನು ಅತೀ ಹತ್ತಿರದಲ್ಲಿ ನೋಡಿ ಅವಳೊಳಗೆ ಆವಾಹನೆಯಾಗಿದ್ದ ನಿರ್ಲಿಪ್ತ ನಿರಾಕರಣೆಯದು. ಅಂತಹ ಪಲ್ಲವಿಯನ್ನು ಆ ರಸ್ತೆಯಲ್ಲಿ ಸಂಧಿಸಿದವನೇ ಈ ರಮಜಾನ್.

ತನ್ನ ಕೆಲಸದ ಸ್ಥಳಕ್ಕೆ ಹೋಗುತ್ತಿದ್ದವಳಿಗೆ ಯಾರೋ ಕರೆದ 'ರಮಜಾನ್' ಹೆಸರಿಂದಾಗಿ ತುಸು ಗಲಿಬಿಲಿಯಾಗಿ ತಿರುಗಿ ನೋಡಿದ್ದಳು. ಹೀಗೊಂದು ಹಬ್ಬವಿದೆ ಅಂತ ಗೊತ್ತಿತ್ತೇ ವಿನಾ ಹೆಸರಿದೆ ಎನ್ನುವುದು ಅವಳಿಗೆ ಹೊಸ ವಿಷಯ. ತಿರುಗಿದವಳನ್ನು ಅವನೂ ನೋಡಿದ್ದ.

ಇಬ್ಬರ ಕೆಲಸದ ಸ್ಥಳವೂ ವಿರುದ್ಧ ದಿಕ್ಕಾದ್ದರಿಂದ ಪ್ರಯಾಣದ ಎಲ್ಲೋ ಒಂದು ಬಿಂದುವಿನಲ್ಲಿ ಅವರಿಬ್ಬರು ಅನಂತರದಲ್ಲಿ ಸಂಧಿಸುತ್ತಿದ್ದರು ಅಥವಾ ಸಂಧಿಸುತ್ತಿರುವುದು ಇಬ್ಬರಿಗೂ ಅರಿವಾಯಿತು.

ಅವನ ಪರಿಚಯದ ನಗುವಿಗೆ ಇವಳದ್ದು ಎಂದಿನಂತೆ ನಿರ್ಲಕ್ಷ್ಯದ ಮೌನದುತ್ತರ.

ಇವಳ ಹೆಸರನ್ನು ಹೇಗೋ ಸಂಪಾದಿಸಿದ ಅವನು ಸುಮ್ಮನೇ ಒಮ್ಮೆ 'ಹಲೋ ಪಲ್ಲವಿ' ಎಂದಿದ್ದ.

ಅವಳ ದುರುದುರು ಮೌನಕ್ಕೂ ನೋಟಕ್ಕೂ ಗಾಬರಿಯಾದರೂ ಯತ್ನ ನಿಲ್ಲಿಸಲಿಲ್ಲ. ಕಣ್ಣು ಕೂಡಿ ಆಸಕ್ತಿ ಹುಟ್ಟಿದ ಮೇಲೆ ಫೋನು ನಂಬರು ಪಡೆಯೋದು ಕಷ್ಟವೇ?

ಅವನಿಂದ ವಿಶಸ್ ಬರತೊಡಗಿತು.

ಎಲ್ಲರಿಗೂ, ಎಲ್ಲದಕ್ಕೂ ಒಣಗಿದವಳಂತೆ ಪ್ರತಿಕ್ರಿಯಿಸುತ್ತಿದ್ದ ಪಲ್ಲವಿ ಕೂಡ ಎಲ್ಲೋ ನಾಲ್ಕು ಹನಿ ನೀರು ಚಿಮುಕಿಸಿಕೊಂಡವಳಂತೆ ಕಾಣತೊಡಗಿದಳು.

ದಾರಿಯಲ್ಲಿ ಕಾಣದಿದ್ದರೆ, ಬೆಳಗಿನ ಮೆಸೇಜು ಬಾರದಿದ್ದರೆ, ನೋಡಿಯೂ ಅವನ ಕಣ್ಣುಗಳು ಅರಳದಿದ್ದರೆ...

ಹನಿ ತೇವ ಸಿಕ್ಕಿದ ಮೇಲೆ ಬೇರು ಹಿಡಿಯುವುದು ಸಹಜ.

ಅವರು ಆರಂಭಿಸಿದ ಮೊದಲ ಸಂಭಾಷಣೆ – 'ಮುಂಜಾವನ್ನೇ ಕಂಗಳಿಗೆ ಮುಡಿಸಿಕೊಂಡ ಹುಡುಗಿಯೇ, ಒಮ್ಮೆಯಾದರೂ ಹಕ್ಕಿಗೊರಳ ಅನುಕರಿಸಬಾರದೇ.'

ಮಾತು ಹೊಸೆಯುವಲ್ಲಿ ಶೂರ ಎಂದುಕೊಂಡ ಪಲ್ಲವಿ ತನಗೇ ಗೊತ್ತಿಲ್ಲದಂತೆ 'ಹೀಗೇ ಏನೂ' ಎಂದಳು.


ಹಾಗೇ ಮೆಸೇಜಿಸಿದವಳು, ಒಮ್ಮೆಗೆ ಗಾಬರಿಯಾಗಿ ಕನ್ನಡಿ ನೋಡಿಕೊಂಡರೆ ಶರೀರ ಎಂದೂ ನೋಡಿರದಂತ ಚಂದವನ್ನ ಮಿಂದು ನಿಂತಿದೆ. ಕಣ್ಣುಗಳು ವಿಚಿತ್ರ ಕಾಂತಿಯಲ್ಲಿವೆ. ಪಲ್ಲವಿಗೂ ತನ್ನ ಈ ಹೊಸ ಬಗೆ ಅಚ್ಚರಿಯೆ.

ಮುಂದಿನದ್ದು ಮಾಮೂಲು. ಜಗದ ಕಣ್ಣು ತಪ್ಪಿಸಿ ಊರು ಸುತ್ತಿದ್ದು, ಸಿನಿಮಾ ನೋಡಿದ್ದು, ಲಾಂಗ್ ಡ್ರೈವ್. ಸುಮ್ಮನೆ ಕೈ ಹಿಡಿದು ಮೈಲುಗಟ್ಟಲೇ ನಡೆದದ್ದು... ಎಲ್ಲಿ ಕಾಲಿಟ್ಟರೂ ಆ ಊರೇ ಸಂಭ್ರಮಿಸುತ್ತಿದೆಯೇನೋ ಅನ್ನುವಷ್ಟು ಪ್ರೇಮ. ಅವರಿಬ್ಬರೂ ಒಬ್ಬರೊಳಗೊಬ್ಬರು ಮುಳುಗಿಹೋದರು. ಹಳೆ ಪಲ್ಲವಿ ಹೀಗಿದ್ದಳು ಎನ್ನುವುದೇ ಮರೆತುಹೋಗುವಷ್ಟು ಬದಲಾಗಿದ್ದಳು.

ಓಂ ಪ್ರೇಮಾಯಾ ನಮಃ!

ಹಬ್ಬದ ಹೆಸರು ಅಂತ ಚೇಷ್ಟೆ ಮಾಡುತ್ತಿದ್ದ ಅವಳ ಕರೆಗೆ ಅವನು 'ರಾಮ್' ಆಗಿದ್ದ. ರಾಮನಿಗೆ ಇವಳು 'ರಾಣಿಸಾಹೇಬಾ' ಆಗಿದ್ದಳು. ಇದು ಪ್ರೇಮಾರಂಭದ ಮತ್ತು ಪ್ರೇಮದ ಉತ್ಕೃಷ್ಟ ದಿನಗಳ ಪರ್ವ.

ಪ್ರತಿ ಶನಿವಾರ ಊರಿಗೆ ಹೋಗುವ ಅವನು ಆ ವಾರವೂ ಹೋಗಿದ್ದ. ಹೊರಡುವ ಮೊದಲು ಸಣ್ಣ ಭೇಟಿ. ಹೋದ ಕೂಡಲೇ ತಲುಪಿದ್ದಕ್ಕೆ ಮೆಸೇಜು. ಇದು ಅವರ ನಡುವೆ ನಡೆಯಲೇ ಬೇಕಿದ್ದ ವಿಧಿಯ ಒಪ್ಪಂದ.



**ಹೋಲಿಕೆ**

ಚಂದ್ರಾರ್ಕ ದಂಪತಿಗೆ
ಅಷ್ಟೊಂದು ಮಕ್ಕಳಿದ್ದರೂ
ಇಲ್ಲ ಸ್ವಲ್ಪವೂ ಚಿಂತೆ ;
ನಾವು ಮನುಷ್ಯರು
ಒಂದೆರಡೇ ಇದ್ದರೂ
ದಿನನಿತ್ಯ ಮನೆ ಒಳಹೊರಗೆ
ತಪ್ಪಿದ್ದಲ್ಲ ಸಂತೆ

– ವಿ. ಸುಬ್ರಹ್ಮಣ್ಯ ಭಟ್

ಆದರೆ... ಆ ದಿನ ಮಾತ್ರ ರಾಮ್ ಶನಿವಾರ ರಾತ್ರಿಯಾದರೂ ಮೆಸೇಜಿಸಿರಲಿಲ್ಲ. ಮನೆಯಲ್ಲಿ ಅಮ್ಮ ತಂಗಿ ಇರುತ್ತಾರಾದ್ದರಿಂದ, ತಂಗಿಗೆ ಅಣ್ಣನ ಫೋನು ನೋಡುವ ಅಭ್ಯಾಸ ಇದ್ದುದರಿಂದ ಫೋನು, ಮೆಸೇಜು ಬೇಡವೆನ್ನುತ್ತಿದ್ದ ರಾಮ್. ಪಲ್ಲವಿಗೂ ಪರಿಸ್ಥಿತಿಯ ಅರಿವಿದ್ದರಿಂದ ಸುಮ್ಮನಾಗುತ್ತಿದ್ದಳು.

ಆ ಇಳಿಸಂಜೆವರೆಗೆ ನೋಡಿದ ಪಲ್ಲವಿಗೆ ಯಾಕೋ ಸರಿಯಿಲ್ಲವೆನಿಸಿ 'ರೀಚ್ಡ್?' ಅಂದಳು. ಆ ಬದಿಯಿಂದ ಎಷ್ಟು ಹೊತ್ತಾದರೂ ಉತ್ತರವಿಲ್ಲ. ಪಲ್ಲವಿ ಮೊದಲ ಬಾರಿಗೆಂಬಂತೆ ದಿಗಿಲುಗೊಂಡಳು.

ಪರಿಚಯವಾದಾಗ ಅದೊಂದು ಸಮಸ್ಯೆ ಎನಿಸಿರಲಿಲ್ಲ. ಆದರೆ ಒಲವು ತೀವ್ರತೆ ಪಡೆದುಕೊಳ್ಳುವಾಗ ಆ ವಿಚಾರ ಅವಳೊಳಗೆ ಸುಳಿದುಹೋಗಿತ್ತು. ಅದನ್ನು ಅವನೊಡನೆ ಹೇಳಿಕೊಂಡಿದ್ದಳು ಕೂಡ. 'ನಮ್ಮ ಪ್ರೀತಿ ಪ್ರಾಮಾಣಿಕವಾಗಿದ್ದರೆ ಈ ಎಲ್ಲಾ ಹರಿವು ತಿರುವುಗಳನ್ನು ಮೀರಿ ಚಲನೆಯಲ್ಲಿರುತ್ತದೆ' ಎಂದಿದ್ದ. ಸಮಾಧಾನವಾಗಿತ್ತು.

ಧರ್ಮ...!

ಯಾರಿಗೆ ಗೊತ್ತು... ಪರಿಸರ ಭಾವವನ್ನು ಬದಲಾಯಿಸಬಹುದು. ಇಲ್ಲೂ ಅದೇ ಕೆಲಸ ಮಾಡಿತೇ? ಅವನಿಲ್ಲದೇ ಬದುಕಬಲ್ಲೆನೆ ನಾನು?

ನಡುರಾತ್ರಿ ಅವನಿಂದ ಮೆಸೇಜು ಬಂತು, 'ರಾಣಿ ಸಾಹೇಬ..!'

'ಯಾಕೋ ಆಯಾಸವಾದ ಹಾಗಾಯ್ತು. ಸ್ವಲ್ಪ ಜ್ವರ ಬಂದಿರೋ ಹಾಗಿದೆ. ಸಾರಿ... ಉತ್ತರಿಸುವುದು ತಡವಾಯ್ತು...' ಒಂದು ನಿರಾಳ ಉಸಿರು ಹೊರಹಾಕಿದಳು ಪಲ್ಲವಿ.

'ರಾಮ್, ನೋ ಪ್ರಾಬ್ಲಂ... ಮಾತ್ರೆ ತಗೋ, ರೆಸ್ಟ್ ಮಾಡು.'

ಜ್ವರ ಬಂದಿದ್ದು ಅಲ್ಲಾದರೂ ಹೆಚ್ಚಿಗೆ ಆಯಾಸವಾಗಿದ್ದು ಇಲ್ಲಿ. ಮತ್ತೆಮತ್ತೆ ಮೆಸೇಜು ಬಂದಿರಬಹುದು ಅಂತ ರಾತ್ರಿ ಪೂರ್ತಿ ನಿದ್ದೆ ಎಚ್ಚರಗಳ ಮುಚ್ಚಿಗೆಯಲ್ಲಿ ಕಳೆದುಹೋಯಿತು.

ಪರಿಚಯವಾದಾಗಿನಿಂದ ಮರೆಯದ ಶುಭೋದಯಾ, ಅದಕ್ಕೆ ಅವನೇ ಕ್ಲಿಕ್ಕಿಸಿದ ಚಿತ್ರಗಳು... ಮಾರನೇ ದಿನ ಬರಲಿಲ್ಲ... ಪಲ್ಲವಿಗೆ ಹೆಸರಿಸಲಾರದ ಹಲವು ಭಾವಗಳು ಸುಳಿದುಹೋಗಿ ಇಲ್ಲೇನಾಗ್ತಿದೆ ಎನುವ ವಿಪ್ಲವದಲ್ಲೇ ಹೈರಾಣಾದಳು.

ಮಧ್ಯಾಹ್ನ ಅವನಿಂದ ಸಂದೇಶ. 'ಜ್ವರ ಹೆಚ್ಚಾಗ್ತಿದೆ. ಆಯಾಸವೂ. ನಾಳೆ ಡೆಂಗ್ಯು ಟೆಸ್ಟ್...'. ಮತ್ತೇನೂ ಇಲ್ಲ ಆ ಸಂದೇಶದಲ್ಲಿ.

ಹೊರಡುವ ಮೊದಲಷ್ಟೆ ಡೆಂಗ್ಯು ಸೊಳ್ಳೆಯನ್ನ ನಿನ್ನ ಹಾಗೇ ಅಂತ ರೇಗಿಸಿದ್ದ. 'ಫ್ರೆಶ್ ವಾಟರಲ್ಲಿ ಮಾತ್ರ ಅದು ಇರೋದು. ಸ್ಟ್ಯಾಂಡರ್ಡ್ ಜೀವನ' ಅಂತ ಜೋರು ನಕ್ಕಿದ್ವಿ ನಾವಿಬ್ರೂ. ಆದರೀಗ?